ರಾಜ್ಯದಲ್ಲಿ ವಿದ್ಯುತ್‌ವಲಯಗಳ ರಚನೆ ಬಗ್ಗೆ

1531 - ಶ್ರೀ ಬಿ. ರಾಜೂಗೌಡ (ಹನೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕದಲ್ಲಿ ಎಷ್ಟು ವಿದ್ಯುತ್ ವಲಯಗಳನ್ನು ರಚಿಸಲಾಗಿರುವುದು, ಮಂಗಳೂರು ವಿದ್ಯುತ್ ವಲಯಕ್ಕೆ ಯಾವ ಯಾವ ಜಿಲ್ಲೆಗಳನ್ನು ಸೇರಿಸಲಾಗಿದೆ.

ಆ) ವಿಭಾಗದ ಕಛೇರಿಯು ಮಂಗಳೂರಿನಲ್ಲಿ ಇಲ್ಲದಿದ್ದರೂ ಅಲ್ಲಿ ಮುಖ್ಯ ಅಭಿಯಂತರವರ(ವಿ) ಕಛೇರಿ ತೆರೆಯಲು ಕಾರಣವೇನು?

ಇ) ವಿಭಾಗದ ಕಛೇರಿಯು ಮಂಗಳೂರಿನಲ್ಲಿ ಇಲ್ಲದಿದ್ದರೂ ಅಲ್ಲೇ ಮುಖ್ಯ ಅಭಿಯಂತರ(ವಿ)ರವರ ಕಛೇರಿ ತೆಗೆಯಲು ಕಾರಣವೇನು?

ಈ) ಮೈಸೂರು ಜಿಲ್ಲೆಯವರಿಗೆ ಇದರಿಂದ ತುಂಬಾ ತೊಂದರೆ ಉಂಟಾಗುವುದಿಲ್ಲವೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) ಕರ್ನಾಟಕದಲ್ಲಿ ನಾಲ್ಕು ವಿದ್ಯುತ್ ವಲಯಗಳನ್ನು ರಚಿಸಲಾಗಿದೆ. ಮಂಗಳೂರು ವಿದ್ಯುತ್ ವಲಯಕ್ಕೆ ಶಿವಮೊಗ್ಗ, ದಕ್ಷಿಣ ಕನ್ನಡ, ಹಾಸನ, ಕೊಡಗು, ಮೈಸೂರು, ಚಿಕ್ಕಮಗಳೂರು ಮತ್ತು ಮಂಡ್ಯ ಜಿಲ್ಲೆಗಳನ್ನು ಸೇರಿಸಲಾಗಿದೆ.

ಆ) ಮತ್ತು ಇ) ವಿಭಾಗದ ಕಛೇರಿಯು ಮಂಗಳೂರಿನಲ್ಲಿ ಅಸ್ತಿತ್ವದಲ್ಲಿರುತ್ತದೆ.

ಈ) ಮೈಸೂರಿನಲ್ಲಿ ಒಂದು ವೃತ್ತ ಕಛೇರಿ ಮತ್ತು ಮೂರು ವಿಭಾಗೀಯ ಕಛೇರಿಗಳು ಕಾರ್ಯ ನಿರ್ವಹಿಸುತ್ತಿರುವುದರಿಂದ ಮೈಸೂರು ಜಿಲ್ಲೆಯವರಿಗೆ ಯಾವ ತೊಂದರೆಯೂ ಕಂಡುಬಂದಿರುವುದಿಲ್ಲ.

ಸರ್ಕಾರಿ ಕ್ಷೇತ್ರ ಉದ್ಯಮಗಳ ಬಗ್ಗೆ.

1532 - ಶ್ರೀ ಜಿ. ರಾಜೂಗೌಡ (ಹನೂರು) : ಮಾನ್ಯ ಮಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ಕ್ಷೇತ್ರದಲ್ಲಿ ಎಷ್ಟು ಉದ್ಯಮಗಳಿವೆ?

ಆ) ಅವುಗಳಲ್ಲಿ ತೊಡಗಿಸಿರುವ ಒಟ್ಟು ಬಂಡವಾಳವೆಷ್ಟು?

ಇ) ಈ ಉದ್ಯಮಗಳಲ್ಲಿ ಎಷ್ಟು ಲಾಭ ಗಳಿಸುತ್ತಿವೆ ಹಾಗೂ ಅವುಗಳು ಯಾವುವು?

ಈ) ಆರ್ಥಿಕ ದುಸ್ಥಿತಿಯಲ್ಲಿ ಉದ್ಯಮಗಳಿವೆಯೆ?

ಉ) ಲಾಭವನ್ನೂ ತೋರಿಸದೆ, ನಷ್ಟವನ್ನೂ ತೋರಿಸದೆ ಎಷ್ಟು ಉದ್ಯಮಗಳು ಇವೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು)

ಅ) 61 (31-3-1990 ರಲ್ಲಿ ಇದ್ದಂತೆ)

ಆ) ಷೇರು ಬಂಡವಾಳ ರೂ. 561.92 ಕೋಟಿಗಳು. (31-3-1990ರಲ್ಲಿ ಇದ್ದಂತೆ)

ಇ) 27 ಉದ್ಯಮಗಳಲ್ಲಿ ಲಾಭಗಳಿಸಿವೆ.

ರೂ. 36.14 ಕೋಟಿ (1989-90ನೇ ಸಾಲಿನಲ್ಲಿ) ಪಟ್ಟಿಯನ್ನು ಲಗತ್ತಿಸಲಾಗಿದೆ.

ಈ) ಹೌದು ಇವೆ.

ಉ) ಇಲ್ಲ.